**ದಿನಾಂಕಃ 27.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ. ಎ.ಸಿ.ವೈ. ವಕೀಲರಿಂದಃ**

ಪ್ರಸ್ತುತ ದಾವೆಯನ್ನು ಪ್ರತಿವಾದಿಯವರು ಕೆಳಮಹಡಿ ಮತ್ತು ಮೊದಲ ಅಂತಸ್ತಿನ ಮಹಡಿಯನ್ನು ಒತ್ತುವರಿ ಮಾಡಿ ಕಟ್ಟಿರುತ್ತಾರೆ ಎಂದು ದಾವೆ ದಾಖಲಿಸಿರುತ್ತೇನೆ ಅಂದರೆ ಸರಿ. ಪ್ರತಿವಾದಿಯವರು ಕೆಳಮಹಡಿಯನ್ನು ಎಷ್ಟು ಅಡಿಯನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆ ಅಂದರೆ ಸಾಕ್ಷಿಯು 3 ಅಡಿ ಓಣಿಯನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ದಾವಾದ ಯಾವ ಪ್ಯಾರಾದಲ್ಲಿ ಸದರಿ ಸಂಗತಿಯನ್ನು ನಮೂದಿಸಿರುತ್ತೀರಿ ಅಂದರೆ ಸಾಕ್ಷಿಯು ವಾದಪತ್ರವನ್ನು ನೋಡಿ ನಮೂದಿಸಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯವರು ಕೆಳಮಹಡಿಯಲ್ಲಿರುವ ಅಂಗಡಿಯನ್ನು ಒತ್ತುವರಿ ಮಾಡಿ ನಿರ್ಮಾಣ ಮಾಡಿರುತ್ತಾರೆ ಎಂಬುದು ನನ್ನ ವಾದವಾಗಿರುತ್ತದೆ. ದಿಃ 30.03.2022 ರಂದು ನಾನು ಪ್ರತಿವಾದಿಯವರ ಕೆಳಮಹಡಿಯಲ್ಲಿರುವ ಅಂಗಡಿಯನ್ನು ಮುಚ್ಚಬೇಕು ಎಂದು ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿ. ಯಾವ ನಿರ್ದೇಶನ ಹಾಗೂ ಅಧಿಕಾರದ ಮೇಲೆ ಸದರಿ ಅರ್ಜಿಯನ್ನು ಸಲ್ಲಿಸಿರುತ್ತೀರಿ ಅಂದರೆ ಸಾಕ್ಷಿಯು ಜಿಲ್ಲಾಧಿಕಾರಿ ಮತ್ತು ಉಪ ವಿಭಾಗಾಧಿಕಾರಿಯವರ ಆದೇಶದ ಮೇರೆಗೆ ಸದರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ತಾನು ಸಲ್ಲಿಸಿದ ಅರ್ಜಿಯ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿರುವುದರಿಂದ ಅದನ್ನು ನಿಡಿ–1 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ನ್ಯಾಯಾಲಯವು ಸಂಪೂರ್ಣ ದಾವಾದ ಕಡತವನ್ನು ಪರಿಶೀಲಿಸಿದಾಗ ಪ್ರತಿವಾದಿಯವರ ಪ್ರತಿವಾದ ಪತ್ರ ಇಲ್ಲ ಎಂದು ಈ ನ್ಯಾಯಾಲಯದ ದಿಃ11.01.2022 ರಂದು ಆದೇಶ ಮಾಡಿರುತ್ತದೆ. ಆ ಕಾರಣ ಸಾಕ್ಷಿಯ ಪಾಟಿ ಸವಾಲನ್ನು ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**